ಉತ್ತರ

1. ಈ ಎರಡೂ ಕಾಮಗಾರಿಗಳಿಗೆ ನಾಲ್ಕು ಬಾರಿ ಗುತ್ತಿಗೆ ಕರೆದಿದ್ದು, ಅಂದಾಜು ಮೊತ್ತದ ಸುಮಾರು ಎರಡರಷ್ಟು ಮೊತ್ತಕ್ಕೆ ಗುತ್ತಿಗೆ ದರಗಳು ಸ್ವೀಕೃತವಾಗಿದ್ದುದರಿಂದ ಗುತ್ತಿಗೆಗಳನ್ನು ತಿರಸ್ಕರಿಸಿದ್ದು, ಈ ಕಾಮಗಾರಿಗಳನ್ನು ಕೈಬಿಡಲಾಗಿದೆ.

2. ಈ ಕಾಮಗಾರಿಗಳಿಗೆ ಕ್ರಮವಾಗಿ ರೂ.108 ಲಕ್ಷ ಮತ್ತು ರೂ.83.50 ಲಕ್ಷಗಳಿಗೆ ರೇಖಾ ಅಂದಾಜು ತಯಾರಿಸಲಾಗಿದ್ದು, ಸಚಿವ ಸಂಪುಟ ಉಪ ಸಮಿತಿಯಿಂದ ಒಪ್ಪಿತವಾಗಿ ನಬಾರ್ಡ್‌ನಿಂದ ಅನುಮೋದನೆ ದೊರೆತಲ್ಲಿ ಕೈಗೊಳ್ಳಲಾಗುವುದು.

ಸೂಳ್ಯ ತಾಲ್ಲೂಕಿನ ಜಾಲ್ಸೂರು-ಸುಬ್ರಮಣ್ಯ ರಸ್ತೆಯಲ್ಲಿ ಮಳೆಗಾಲದಲ್ಲಿ ಸೇತುವೆ ಆಗಾಗ್ಗೆ ಬ್ಲಾಕ್ ಆಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 668(906)

ಸದಸ್ಯರ ಹೆಸರು : ಶ್ರೀ ಅಂಗಾರ ಎಸ್(ಸುಳ್ಯ)

ಉತ್ತರಿಸುವ ಸಚಿವರು : ಶ್ರೀ ಧರ್ಮಸಿಂಗ್(ಲೋಕೋಪಯೋಗಿ ಸಚಿವರು)

ಪ್ರಶ್ನೆ

ಅ) ಸುಳ್ಯ ತಾಲ್ಲೂಕಿನ ಜಾಲ್ಸೂರು-ಸುಬ್ರಮಣ್ಯ ರಸ್ತೆಯಲ್ಲಿ ಸೋಣಂಗೇರಿ ಹಾಗೂ ಕೊಯಿಕುಳಿ ಎಂಬಲ್ಲಿ ಮುಳುಗು ಸೇತುವೆಗಳಿದ್ದು, ಮಳೆಗಾಲದಲ್ಲಿ ಆಗಾಗ್ಗೆ ಬ್ಲಾಕ್ ಆಗಿ ವಾಹನ ಸಂಚಾರಕ್ಕೆ ಹಾಗೂ ಸಾರ್ವಜನಿಕರಿಗೆ ಓಡಾಡಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸದರಿ ಮುಳುಗು ಸೇತುವೆಗಳನ್ನು ಸರ್ವಋತು ಸೇತುವೆಯನ್ನಾಗಿ ಮಾರ್ಪಡಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ? ಇದ್ದರೆ ಯಾವಾಗ ಪ್ರಾರಂಭಿಸಲಾಗುವುದು?

ಉತ್ತರ

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ) ಈ ಸೇತುವೆಗಳ ನಿರ್ಮಾಣವನ್ನು ಹಣದ ಲಭ್ಯತೆಯ ಮೇರೆಗೆ ಕರ್ನಾಟಕ ರಸ್ತೆ

ಅಭಿವೃದ್ಧಿ ನಿಗಮದ ಮೂಲಕ ತೆಗೆದುಕೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.

ಸೋಮವಾರಪೇಟೆ ತಾಲ್ಲೂಕಿನಲ್ಲಿ ಕಂದಾಯ ಇಲಾಖೆಯಿಂದ ವಿವಿಧ ಇಲಾಖೆಗೆ ಜಾಗ ಮಂಜೂರಾತಿ.

ಚುಕ್ಕೆ ಗುರ್ತಿಲ್ಲದ ಪ್ರಶ್ನೆ ಸಂಖ್ಯೆ : 669(897)

ಸದಸ್ಯರ ಹೆಸರು : ಶ್ರೀ ಅಪ್ಪಚ್ಚು ರಂಜನ್ ಎಂ.ಪಿ.(ಸೋಮವಾರಪೇಟೆ)

ಉತ್ತರಿಸುವ ಸಚಿವರು : ಶ್ರೀ ಹೆಚ್.ಪಿ.ಶ್ರೀಕಂಠಯ್ಯ(ಕಂದಾಯ ಸಚಿವರು)

ಪ್ರಶ್ನೆ

ಅ) ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕಿನ ಕೂಡಿಗೆಯಲ್ಲಿ ಸರ್ಕಾರದ ವಿವಿಧ ಇಲಾಖೆಗಳಿಗೆ ಎಷ್ಟು ಜಾಗ ಮಂಜೂರು ಮಾಡಲಾಗಿದೆ?

ಆ) ಯಾವ ಯಾವ ಇಲಾಖೆಗೆ ಎಷ್ಟೆಷ್ಟು ವಿಸ್ತೀರ್ಣದ ಜಾಗ ಮಂಜೂರು ಮಾಡಲಾಗಿದೆ? ಎಷ್ಟು ಜಾಗ ಬಾಕಿ ಇದೆ? (ವಿವರ ನೀಡುವುದು)

ಉತ್ತರ

ಅ) ಕೂಡಿಗೆಯಲ್ಲಿ ಸರ್ಕಾರದ ವಿವಿಧ ಇಲಾಖೆಗಳಿಗೆ 158.50 ಎಕರೆ ಜಾಗ ಮಂಜೂರು ಮಾಡಲಾಗಿದೆ.

ಆ) ಕೂಡಿಗೆಯ ಸರ್ಕಾರಿ ವಿವಿಧ ಇಲಾಖೆಗಳಿಗೆ ಮಂಜೂರು ಮಾಡಿದ ಸರ್ಕಾರಿ ಜಮೀನಿನ ವಿವರ ಈ ಕೆಳಕಂಡಂತಿದೆ.

(1)	ಲೋಕೋಪಯೋಗಿ ಇಲಾಖೆಗೆ	4.91 ಎಕರೆ
(2)	ನೀರಾವರಿ ಇಲಾಖೆಗೆ	7.32 "
(3)	ಆಗ್ರಿಕಲ್ಚರ್ ಫಾರಂ ಕೊಡಿಗೆಗೆ	91.77 "
(4)	ಜಿಲ್ಲಾಪಂಚಾಯತಿಗೆ ಆಶ್ರಯ ಯೋಜನೆ	17.50
(5)	ಕೂಡಿಗೆ ಗ್ರಾಮೀಣ ತರಬೇತಿ ಕೇಂದ್ರ	13.30